# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1195 |
| ಮಾನ್ಯ ವಿಧಾನ ಪರಿಷತ್ ಸದಸ್ಯರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | ದಿನಾಂಕ: 29.12.2022 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೇಂದ್ರ ಸರ್ಕಾರ ಇತ್ತೀಚೆಗೆ ಮಧ್ಯಸ್ಥಿಕೆ ಮತ್ತು ಮಾಹಿತಿ ತಂತ್ರಜ್ಞಾನ (Mediation and Information Technology)ದ ಬಗ್ಗೆ ಒಂದು ಕಾರ್ಯಾಗಾರವನ್ನು ನಡೆಸಿ ನ್ಯಾಯಾಂಗದಲ್ಲಿ ವಿವಾದಗಳನ್ನು ಬಗೆಹರಿಸುವ ಪರ್ಯಾಯ ವ್ಯವಸ್ಥೆಗೆ ಲೋಕಅದಾಲತ್, ಗ್ರಾಮ ನ್ಯಾಯಾಲಯಗಳು ಮತ್ತು ಮಧ್ಯಸ್ಥಿಕೆ ಮತ್ತು ಸಂಧಾನ ಕೇಂದ್ರಗಳ ಸ್ಥಾಪನೆ ಬಗ್ಗೆ ವಿಸ್ತಾರವಾಗಿ ಚರ್ಚಿಸಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ದಿನಾಂಕ 14.10.2022 ರಿಂದ 16.10.2022 ರವರೆಗೆ ಗುಜರಾತ್ ರಾಜ್ಯದ ಏಕ್ತಾ ನಗರ ಟೆಂಟ್ ಸಿಟಿ ನರ್ಮದಾ ದಲ್ಲಿ ನಡೆದ ಎಲ್ಲ ರಾಜ್ಯದ ಮಾನ್ಯ ಕಾನೂನು ಸಚಿವರುಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಸಮ್ಮೇಳನದಲ್ಲಿ ನ್ಯಾಯಾಂಗದಲ್ಲಿನ ವಿವಾದಗಳನ್ನು ಬಗೆಹರಿಸುವ ವ್ಯವಸ್ಥೆಗಳಾದ ಮಧ್ಯಸ್ಥಿಕ ಕೇಂದ್ರ, ಲೋಕದಾಲತ್, ಆರ್ಬಿಟ್ರೇಷನ್ ವಿಷಯವಾಗಿ ವಿಸ್ತೃತವಾಗಿ ಚರ್ಚಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ. ಲಾ 27 ಎಲ್‌ಸಿಇ 2009, ದಿನಾಂಕ: 25.09.2010ರನ್ವಯ ಪ್ರಸ್ತುತ ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರಿನಲ್ಲಿ ಎರಡು ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದು, ಅದರಂತೆ ಸದರಿ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದಲ್ಲಿ ಇನ್ನೂ ಹೆಚ್ಚಿನ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಆ) | ರಾಜ್ಯದಲ್ಲಿ ಈ ವ್ಯವಸ್ಥೆ ರೂಪಿಸುವ ಮತ್ತು ಸ್ಥಾಪಿಸುವ ಕ್ರಮದಲ್ಲಿ ರಾಜ್ಯ ಸರ್ಕಾರದ ಪಾತ್ರವೇನು; (ಪೂರ್ಣ ಮಾಹಿತಿ ನೀಡುವುದು) | ದಿನಾಂಕ 06.12.2012 ರಂದು ಸರ್ಕಾರಿ ಆದೇಶ ಸಂಖ್ಯೆ: LAW 273 LAC 2012 ರ ಅಡಿಯಲ್ಲಿ ಕರ್ನಾಟಕ ಸರ್ಕಾರ ಬೆಂಗಳೂರಿನಲ್ಲಿ ಆರ್ಬಿಟ್ರೇಷನ್ & ಕನ್ಸಾಲೇಷನ್ ಕೇಂದ್ರವನ್ನು ಸ್ಥಾಪಿಸಿರುತ್ತದೆ. ಈ ಕೇಂದ್ರ ಹಲವಾರು ಪ್ರಕರಣವನ್ನು ಆರ್ಬಿಟ್ರೇಷನ್ & ಕನ್ಸಾಲೇಷನ್ ಮೂಲಕ ಇತ್ಯರ್ಥಗೊಳಿಸುತ್ತಿರುತ್ತದೆ.<br><br>ಸಿಪಿಸಿ ಕಲಂಗಳು 89, 122 ಮತ್ತು 126 ರಡಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಕರ್ನಾಟಕ ಸರ್ಕಾರದ ಪೂರ್ವಾನುಮತಿಯೊಂದಿಗೆ " The Karnataka Civil Procedure (Mediation) Rules 2005" ವನ್ನು ದಿನಾಂಕ: 26.12.2006 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಿದೆ.<br><br>ಈ ನಿಯಮಗಳ ಅಡಿಯಲ್ಲಿ 2007 ರಲ್ಲಿ ಬೆಂಗಳೂರು ಮಧ್ಯಸ್ಥಿಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಮಧ್ಯಸ್ಥಿಕೆ ಕೇಂದ್ರದಲ್ಲಿ 114 ಜನ |

| | | |
|---|---|---|
| | | ತರಬೇತಿ ಹೊಂದಿದ ಮಧ್ಯಸ್ಥಗಾರರು 17 ಜನ, ತರಬೇತಿದಾರರು ಮಧ್ಯಸ್ಥಿಕೆ ಮೂಲಕ ಪ್ರಕರಣಗಳನ್ನು ಇತ್ಯರ್ಥ ಮಾಡುವಲ್ಲಿ ಸಹಯಕರಾಗಿದ್ದಾರೆ.<br><br>ಸರ್ಕಾರದ ಆದೇಶ ಸಂಖ್ಯೆ. ಲಾ 27 ಎಲ್‌ಸಿಇ 2009, ದಿನಾಂಕ: 25.09.2010ರನ್ವಯ ಪ್ರಸ್ತುತ ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರಿನಲ್ಲಿ ಎರಡು ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದು, ಅದರಂತೆ ಸದರಿ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದಲ್ಲಿ ಇನ್ನೂ ಹೆಚ್ಚಿನ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಇ) | ರಾಜ್ಯದಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನಿರ್ದೇಶನದನ್ವಯ ಮತ್ತು ಕೇಂದ್ರ ಸರ್ಕಾರದ ನೀತಿ ಅನ್ವಯ ಪ್ರಸ್ತುತ ರಾಜ್ಯದಲ್ಲಿ ಮಧ್ಯಸ್ಥಿಕೆ ಮತ್ತು ಸಂಧಾನ ವ್ಯವಸ್ಥೆ ಯಾವುದು ಮತ್ತು ಇದರ ಕಾರ್ಯನಿರ್ವಹಣೆಯ ಉಸ್ತುವಾರಿ ವ್ಯವಸ್ಥೆ ಯಾವುದು; (ಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಮಧ್ಯಸ್ಥಿಕೆ ಕೇಂದ್ರ, ಬೆಂಗಳೂರು ಇದು ಕರ್ನಾಟಕ ಉಚ್ಚ ನ್ಯಾಯಾಲಯದ ಅಧೀನದಲ್ಲಿ ಬರಲಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಪ್ರಧಾನ ಪೋಷಕರಾಗಿರುತ್ತಾರೆ. ಬೆಂಗಳೂರು ಮಧ್ಯಸ್ಥಿಕೆ ಕೇಂದ್ರವು ಉಚ್ಚ ನ್ಯಾಯಾಲಯದ ಐದು ಜನ ನ್ಯಾಯಾಧೀಶರನ್ನೊಳಗೊಂಡ ಒಂದು ಸಮಿತಿಯನ್ನು ಹೊಂದಿದ್ದು, ಸದರಿ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಜನ ಗವರ್ನರ್‌ಗಳನ್ನು ಒಳಗೊಂಡಿದೆ. ಮುಂದುವರೆದು, ಬೆಂಗಳೂರು ಮಧ್ಯಸ್ಥಿಕೆ ಕೇಂದ್ರಕ್ಕೆ ಜಿಲ್ಲಾ ನ್ಯಾಯಾಧೀಶರು ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರನ್ನು ನಿರ್ದೇಶಕ ಮತ್ತು ಉಪ ನಿರ್ದೇಶಕರನ್ನಾಗಿ ನಿಯೋಜನೆ ಮೇಲೆ ನೇಮಕ ಮಾಡಲಾಗಿರುತ್ತದೆ.<br><br>ಉಚ್ಚ ನ್ಯಾಯಾಲಯದ ಧಾರವಾಡ ಮತ್ತು ಕಲಬುರಗಿ ಪೀಠಗಳ ಮಧ್ಯಸ್ಥಿಕೆ ಕೇಂದ್ರಗಳು ಬೆಂಗಳೂರಿನ ಮಧ್ಯಸ್ಥಿಕೆ ಕೇಂದ್ರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. |
| (ಈ) | ರಾಜ್ಯದಲ್ಲಿನ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆಗೆ ಇರುವ ವ್ಯವಸ್ಥೆ ಯಾವುದು ಮತ್ತು ವ್ಯವಸ್ಥೆಗೆ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಮತ್ತು ಬೆಂಬಲಗಳು ಯಾವುದು? (ಪೂರ್ಣ ಮಾಹಿತಿ ನೀಡುವುದು) | ಮಾನ್ಯ e-Committee, ಸರ್ವೋಚ್ಚ ನ್ಯಾಯಾಲಯ ಮತ್ತು ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯ ಮಂತ್ರಾಲಯದ ನ್ಯಾಯ ಇಲಾಖೆಯ ಸಹಯೋಗದೊಂದಿಗೆ ಇ-ನ್ಯಾಯಾಲಯ ಕಾರ್ಯಕ್ರಮದಡಿ ಮಾಹಿತಿ ತಂತ್ರಜ್ಞಾನ ಮತ್ತು ಗಣಕೀಕರಣ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.<br><br>2007-2015 ನೇ ಅವಧಿಗೆ ಸಂಬಂಧಿಸಿದಂತೆ ಮೊದಲನೇ ಹಂತದಲ್ಲಿ e-Committeeಯು ನ್ಯಾಯಾಂಗ ವ್ಯವಸ್ಥೆಯಡಿ Hardware Installation, Case Information System ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಗಣಕೀರಣಗೊಳಿಸಲಾಗಿದೆ. ಮುಂದುವರೆದು, ಇ-ನ್ಯಾಯಾಲಯದ ಯೋಜನೆಯಡಿ ರಾಷ್ಟ್ರೀಯ ನೀತಿ ಮತ್ತು ಕಾರ್ಯನೀತಿಗೆ ಸಂಬಂಧಿಸಿದಂತೆ |

| | | |
|---|---|---|
| | | ಮಾಹಿತಿ ಮತ್ತು Communication Technologyಯನ್ನು ಅನುಷ್ಠಾನಗೊಳಿಸಲಾಗಿದೆ.<br><br>ಮುಂದುವರೆದು, ಇ-ನ್ಯಾಯಾಲಯದ 2ನೇ ಹಂತದ ಯೋಜನೆಯನ್ನು 2015ನೇ ಸಾಲಿನಲ್ಲಿ ಪ್ರಾರಂಭಿಸಿ ವ್ಯಾಜ್ಯದಾರರು, ವಕೀಲರು ಮತ್ತು ಪಾಲುದಾರರಿಗೆ ಈ ನಿಟ್ಟಿನಲ್ಲಿ ಸೇವೆಯನ್ನು ಒದಗಿಸಲಾಗುತ್ತಿದೆ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯ e-Committeeಯ ನಿರ್ದೇಶನ / ಮಾರ್ಗಸೂಚಿಯನ್ವಯ ರಾಜ್ಯದಲ್ಲಿನ ನ್ಯಾಯಾಂಗ ವ್ಯವಸ್ಥೆಗೆ ಐಟಿ ಉತ್ಪನ್ನಗಳಾದ Servers, Computers, UPS ಮತ್ತು Batteries, projectors, Laptops, Printers, Scanners, Display Boards, KISOSKS, VC Equipments, Justice Clock ಮುಂತಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br><br>ಅಲ್ಲದೇ, ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯ ಮಂತ್ರಾಲಯದ ನ್ಯಾಯ ಇಲಾಖೆಯು ಇ-ನ್ಯಾಯಾಲಯದ 2ನೇ ಹಂತದಡಿ ಈ ವ್ಯವಸ್ಥೆಗಾಗಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರೂ. 65,38,39,900/-ಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಪ್ರಸ್ತುತ ರೂ. 2,47,97,562/-ಗಳ ಅನುದಾನ ಬಾಕಿ ಉಳಿದಿದ್ದು, ಸದರಿ ಅನುದಾನವನ್ನು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬಳಕೆ ಮಾಡಲಾಗುವುದು. |

**ಸಂಖ್ಯೆ: ಲಾ-ಎಲ್‌ಎಡಿ/532/2022**

**(ಜೆ.ಸಿ. ಮಾಧುಸ್ವಾಮಿ)**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು